ಫಾರೆಸ್ಟ್ಸ ಇಲಾಖೆ.

ಪ್ರಕಟನೆ.

ಮೈಸೂರು ಡಿಸ್ಟ್ರಿಕ್ಟ್ಸ ಗುಂಡ್ಲುಪೇಟೆ ತಾಲ್ಲೂಕಿನಲ್ಲಿರುವ ಕಣಿಯನಪುರ ಬ್ಲಾಕ್ I ನ್ನು ಮನ್ನಾಜಂಗಲು ಮಾಡುವ ವಿಷಯದಲ್ಲಿ ಸ್ಯ 1909ನೆ ಇಸವಿ ಡಿಸೆಂಬರ್ ತಾರೀಖು 16ನೆ ಮೈಸೂರು ಕನ್ನಡ ಗೆಜೆಟ್ಟಿನ 2ನೆ ಭಾಗದ 892—893ನೆ ಪೇಜುಗಳಲ್ಲಿ ವಿಶದವಾಗಿ ತಿಳಿದುಕೊಳ್ಳಬಹುದು.

ಮೈಸೂರು ಡಿಸ್ಟ್ರಿಕ್ಟ್ಸ ಗುಂಡ್ಲುಪೇಟೆ ತಾಲ್ಲೂಕಿನಲ್ಲಿರುವ ಕಣಿಯನಪುರ ಬ್ಲಾಕ್ II ನ್ನು ಮನ್ನಾಜಂಗಲು ಮಾಡುವ ವಿಷಯದಲ್ಲಿ ಸ್ಯ 1909ನೆ ಇಸವಿ ಡಿಸೆಂಬರ್ ತಾರೀಖು 16ನೆ ಮೈಸೂರು ಕನ್ನಡ ಗೆಜೆಟ್ಟಿನ 2ನೆ ಭಾಗದ 894—895ನೆ ಪೇಜುಗಳಲ್ಲಿ ವಿಶದವಾಗಿ ತಿಳಿದುಕ್ಕೊಳ್ಳಬಹುದು.

ಶಿವಮೊಗ್ಗ ಡಿಸ್ಟ್ರಿಕ್ಟ್ಸ ನಗರ ತಾಲ್ಲೂಕು ಚಕ್ಕ ಬ್ಲಾಕನ್ನು ಮನ್ನಾಜಂಗಲು ಮಾಡುವ ವಿಷಯದಲ್ಲಿ ಸ್ಯ 1909ನೆ ಇಸವಿ ಡಿಸೆಂಬರ್ ತಾರೀಖು 16ನೆ ಮೈಸೂರು ಕನ್ನಡ ಗೆಜೆಟ್ಟಿನ 2ನೆ ಭಾಗದ 895—896—897ನೆ ಪೇಜುಗಳಲ್ಲಿ ವಿಶದವಾಗಿ ತಿಳಿದುಕೊಳ್ಳಬಹುದು.

ಎಂ. ಶ್ಯಾಮರಾವ್,
ಫಾರೆಸ್ಟ್ಸ ಸೆಟಲ್‌ಮೆಂಟ್ ಆಫೀಸರ್ ಇ೯ ಮೈಸೂರು.

ಕೋಲಾರ ಡಿಸ್ಟ್ರಿಕ್ಟ್ಸ.

ಇಸ್ತಿಹಾರ್ನಾಮೆ.

ಕೋಲಾರ ತಾಲ್ಲೂಕು ವಕ್ಕಲೇರಿ ಹೋಬಳಿಗೆ ಸೇರಿದ ಜೋಡಿ ತಲಗೊಂದಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಕೋಲಾರ ತಾಲ್ಲೂಕು ಕಛೇರಿಯಲ್ಲಿ 1910ನೆ ಜನವರಿ 10ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚು ತಪಶೀಲ್ ಬಗ್ಗೆ 1909ನೆ ಇಸವಿ ಡಿಸೆಂಬರ್ 16ನೆ ಮಂಗಳವಾರ ಮೈಸೂರು ಗೆಜೆಟ್ಟಿನ 2ನೆ ಭಾಗದ 900ನೆ ಪೇಜು ನೋಡತಕ್ಕದ್ದು.

ಎ. ವೇದಾಂತದೇಶಿಕಂ ಐಯ್ಯಂಗಾರ್,
ಜಾರ್ ಡೆಪ್ಯೂಟಿ ಕಮಿಷನರ್.

ಮೈಸೂರು ಡಿಸ್ಟ್ರಿಕ್ಟ್ಸ.

ಇಸ್ತಿಹಾರ್ನಾಮೆ.

ತಾರೀಖು 8ನೆ ಡಿಸೆಂಬರ್ 1909ನೆ ಇಸವಿ.

ಮಳವಳ್ಳಿ ತಾಲ್ಲೂಕು ಕಿರಗಾವಲು ಹೋಬಳಿಗೆ ಸೇರಿದ ಜೋಡಿ ಹಣಕೊಳಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಮಳವಳ್ಳಿ ತಾಲ್ಲೂಕು ಕಛೇರಿಯಲ್ಲಿ 1910ನೆ ಇಸವಿ ಜನವರಿ ಮಾಹೆ 31ನೆ ತಾರೀಖಿನ ದಿವಸ ದಿವಿ 11 ಘಂಟೆಗೆ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿ ಇದೆ.

ಹೆಚ್ಚು ತಪಶೀಲ್ ಬಗ್ಗೆ 1909ನೆ ಇಸವಿ ಡಿಸೆಂಬರ್ 16ನೆ ಮಂಗಳವಾರ ಮೈಸೂರು ಗೆಜೆಟ್ಟಿನ-2ನೆ ಭಾಗದ 901ನೆ ಪೇಜು ನೋಡತೆಕ್ಕದ್ದು.

ಎಂ. ಕಾಂತರಾಜೆ ಅರಸ್,
ಡೆಪ್ಯೂಟಿ ಕಮಿಷನರ್.

ಪ್ರಕಟನೆ.

ತಾರೀಖು 18ನೆ ಡಿಸೆಂಬರ್ 1909.

ಸ್ಯ1907ನೆ ಸೆಪ್ಟೆಂಬರ್ ಮಾಹೆ 17ನೆ ಮಂಗಳವಾರ 2585-95—ಲೋ. ಬೋ. 462-06-3ನೆ ನಂಬರು ಗವರ್ನ್‌ಮೆಂಟ್ ಆರ್ಡರು ಅನುಸರಿಸಿ ಎಡತೊರೆ ತಾಲ್ಲೂಕು ಚುಂಚನಕಟ್ಟೆಯಲ್ಲಿ ಬರುವ ಜನವರಿ 14ನೆ ತಾರೀಖು ಲಾಗಾಯಿತು ಬಂದು ವಾರದ ವರವಿಗೂ ಶ್ರೀ ರಾಮದೇವರ ರಥೋತ್ಸವ ನಡೆಯುವ ಕಾಲದಲ್ಲಿ ಬಂದು ದನಗಳ ಪ್ರದರ್ಶನವು ನಡೆಯುವದು.

2. ಸದರಿ ಪ್ರದರ್ಶನವು ಚುಂಚನಕಟ್ಟೆ ಬಂಗ್ಲಾ ಕಾಂಪೌಂಡಿನಲ್ಲಿ ನಡೆಯುತ್ತೆ.

3. ಪ್ರದರ್ಶನಕ್ಕೆ ಬರುವ ದನಗಳಮೇಲೆ ಈ ಕೆಳಗೆ ಕಂಡಮೇರೆ ಫೀಸು ವಸೂಲ್ಮಾಡಲ್ಪಡುತ್ತೆ.

		ರೂ.	ಆ.	ಪೈ.
(1)	ದೊಡ್ಡ ಬಂದು ಜೊತೆ ಹೋರಿಗಳಿಗೆ	0	8	0
(2)	ಬಂದು ಸಣ್ಣ ಜೊತೆ ಹೋರಿಗಳಿಗೆ	0	4	0
(3)	ಹೋರಿ ಬಂಟಿ ಬಂದಕ್ಕೆ	0	4	0